ಕ್ರ.ಸಂ. 41, 149ᵀʰ

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್,ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರ ಹೇಳಿಕೆ.**

**ಸೂಚನೆ :**

"ದಿನಾಂಕ: 15-02-2023ರ ವಿಜಯವಾಣಿ ದಿನ ಪತ್ರಿಕೆಯಲ್ಲಿ ಪ್ರಕಟವಾಗಿರುವ ವರದಿಯನ್ನು ಉಲ್ಲೇಖಿಸುತ್ತೇನೆ.

ಕಳೆದ ಐದು ವರ್ಷಗಳಲ್ಲಿ ರಾಜ್ಯಾದ್ಯಂತ ಬಾಲಮಂದಿರಗಳಿಂದ 484 ಮಕ್ಕಳು ಕಾಣೆಯಾದ ಪೈಕಿ 365 ಮಕ್ಕಳು ಪತ್ತೆಯಾದರೆ, ಹಲವು ವರ್ಷಗಳಿಂದ ನಾಪತ್ತೆಯಾದ 199 ಮಕ್ಕಳು ಇನ್ನೂ ಸುಳಿವೇ ಸಿಕ್ಕಿಲ್ಲ ಎಂಬುದು ಪ್ರಕಟವಾಗಿರುವ ವಿಷಯವನ್ನು ತಿಳಿಸಲು ಮನಸ್ಸಿಗೆ ದುಃಖವೆನಿಸುತ್ತದೆ.

ಇದರಲ್ಲಿ ಅತಿಹೆಚ್ಚು ಹೆಣ್ಣು ಮಕ್ಕಳು ನಾಪತ್ತೆಯಾಗಿದ್ದು ಮಾನವನ ಕಳ್ಳಸಾಗಣೆಗೆ ಹಾಗೂ ಅನೈತಿಕ ಚಟುವಟಿಕೆಗಳಿಗೆ ಇವರನ್ನು ದೂಡಿರುವ ಬಗ್ಗೆ ಬಲವಾದ ಅನುಮಾನ ಮೂಡಲಾರಂಭಿಸಿದೆ.

ನಾಪತ್ತೆಯಾಗಿರುವ ಮಕ್ಕಳ ಪೈಕಿ ಬೆಂಗಳೂರು ನಗರ, ಮೈಸೂರು, ಧಾರವಾಡ ಮತ್ತು ಬಳ್ಳಾರಿ ಬಾಲಮಂದಿರದವರೇ ಹೆಚ್ಚು, ವರ್ಷದಿಂದ ವರ್ಷಕ್ಕೆ ವಿವಿಧ ಕಾರಣಗಳಿಂದ ಬಾಲಮಂದಿರಗಳಿಂದ ತಪ್ಪಿಸಿಕೊಳ್ಳದಿರುವುದು ವಿಪರ್ಯಾಸ. ಬಾಲಮಂದಿರ ಅಧಿಕಾರಿಗಳು ಒಮ್ಮೆ ದೂರು ಕೊಟ್ಟು ಮುಂದೆ ಯಾವುದೇ ಕ್ರಮ ಕೈಗೊಳ್ಳದೆ ಸುಮ್ಮನಾಗುತ್ತಿರುವುದು ನಾಪತ್ತೆಯಾದ ಮಕ್ಕಳ ಪತ್ತೆಗೆ ಹಿನ್ನಡೆಯಾಗುತ್ತಿದೆ. ಆದುದರಿಂದ ನಾಪತ್ತೆಯಾದ ಜಿಲ್ಲಾವಾರು ಮಕ್ಕಳ ವಿವರ ಇಂತಿದೆ.

1. ಬೆಂಗಳೂರು ಗ್ರಾಮಾಂತರ-42 2. ಬೆಂಗಳೂರು ನಗರ-21 3.ಧಾರವಾಡ-16
4. ವಿಜಯಪುರ-09 5. ಮಂಡ್ಯ-09 6. ಕಲುಬುರಗಿ-06
7. ದಾವಣಗೇರಿ-06 8. ಮೈಸೂರು-06 9. ದಕ್ಷಿಣ ಕನ್ನಡ-03
10. ಕೋಲಾರ-03

ಹಲವು ವರ್ಷಗಳಿಂದ ಕಾಣೆಯಾದವರು ಈವರೆಗೆ ಸುಳಿವು ಸಿಕ್ಕಿಲ್ಲ. ಎಂಬುವುದು ಖೇದದ ವಿಷಯವಾಗಿದೆ. ಸರ್ಕಾರವು ನಾಪತ್ತೆಯಾದ ಮಕ್ಕಳ ಪತ್ತೆಗೆ ಅನೇಕ ತರಹದ ಕಾರ್ಯ ಮಾಡಲಾಗುತ್ತಿದೆ ಎಂದು ವರದಿಯಲ್ಲಿ ಹೇಳಲಾಗಿದೆ. ಇನ್ನೂ ಹೆಚ್ಚಿನ ಮಟ್ಟದಲ್ಲಿ ಸರ್ಕಾರ ಸಂಬಂಧ ಪಟ್ಟ ಇಲಾಖೆ ಮತ್ತು ಪೋಲೀಸ್ ಇಲಾಖೆಯು ಹೆಚ್ಚಿನ ಮಟ್ಟದಲ್ಲಿ ಯೋಜನೆಗಳನ್ನು ರೂಪಿಸಿ ಮಕ್ಕಳ ರಕ್ಷಣೆಯನ್ನು ಮಾಡಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ".

**ಉತ್ತರ :**

ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ರಾಜ್ಯದಲ್ಲಿ ಒಟ್ಟು 99-ಬಾಲಮಂದಿರಗಳು ಹಾಗೂ ವೀಕ್ಷಣಾಲಯಗಳು ಕಾರ್ಯನಿರ್ವಹಿಸುತ್ತಿದ್ದು, ಈ ಮಕ್ಕಳ ಪಾಲನಾ ಸಂಸ್ಥೆಗಳಿಂದ ಕೆಲವೊಂದು ಸಂದರ್ಭಗಳಲ್ಲಿ ಮಕ್ಕಳು ತಪ್ಪಿಸಿಕೊಂಡಿರುತ್ತಾರೆ. 2015ನೇ ಸಾಲಿನಿಂದ 2021ನೇ ಸಾಲಿನವರೆಗೆ ಒಟ್ಟು 485 ಮಕ್ಕಳು ತಪ್ಪಿಸಿಕೊಂಡಿದ್ದು, ಈ ಪೈಕಿ ಪ್ರಸ್ತಾಪಿಸಿರುವ 10 ಜಿಲ್ಲೆಗಳ ಮಾಹಿತಿಯು ಈ ಕೆಳಕಂಡತಿರುತ್ತದೆ.

| ಕ್ರ.ಸಂ | ಜಿಲ್ಲೆ | ಕಾಣೆಯಾದ ಮಕ್ಕಳ ಸಂಖ್ಯೆ | ಪತ್ತೆಹಚ್ಚಲಾದ ಮಕ್ಕಳ ಸಂಖ್ಯೆ | ಪತ್ತೆ ಹಚ್ಚಲು ಬಾಕಿ ಇರುವ ಸಂಖ್ಯೆ |
|---|---|---|---|---|
| 1 | ಬೆಂಗಳೂರು (ಗ್ರಾ) | 00 | 00 | 00 |
| 2 | ಬೆಂಗಳೂರು (ನ) | 106 | 59 | 47 |
| 3 | ಧಾರವಾಡ | 50 | 38 | 12 |
| 4 | ವಿಜಯಪುರ | 13 | 09 | 04 |
| 5 | ಮಂಡ್ಯ | 12 | 12 | 00 |
| 6 | ಕಲ್ಬುರ್ಗಿ | 10 | 07 | 03 |
| 7 | ದಾವಣಗೆರೆ | 08 | 02 | 06 |
| 8 | ಮೈಸೂರು | 60 | 46 | 14 |
| 9 | ದಕ್ಷಿಣ ಕನ್ನಡ | 21 | 18 | 03 |
| 10 | ಕೋಲಾರ | 12 | 08 | 04 |
| | **ಒಟ್ಟು** | 292 | 199 | 93 |

2. ಬಾಲಮಂದಿರಗಳಲ್ಲಿ ಹಾಗೂ ವೀಕ್ಷಣಾಲಯಗಳಲ್ಲಿ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯನ್ವಯ ಬಾಹ್ಯಮೂಲಗಳಿಂದ ಸಿಬ್ಬಂದಿಗಳನ್ನು ವಿವಿಧ ಕಾರ್ಯಗಳಿಗೆ ನೇಮಿಸಿಕೊಳ್ಳುತ್ತಿದ್ದು, ಅದರಲ್ಲಿ ಭದ್ರತಾ ಸಿಬ್ಬಂದಿಯೂ ಸೇರಿರುತ್ತಾರೆ. ಆದರೆ, ಈ ರೀತಿ ನೇಮಿಸಿಕೊಳ್ಳುವ ಭದ್ರತಾ ಸಿಬ್ಬಂದಿಗಳಿಗೆ ಪೊಲೀಸ್ ಇಲಾಖೆಯ ಸಿಬ್ಬಂದಿಗಳ ರೀತಿ ಭದ್ರತಾ ತರಬೇತಿ ಇಲ್ಲದೇ ಇರುವ ಹಿನ್ನೆಲೆಯಲ್ಲಿ, ಈ ರೀತಿ ಬಾಲಮಂದಿರಗಳಿಂದ ಮಕ್ಕಳು ತಪ್ಪಿಸಿಕೊಳ್ಳುತ್ತಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಇದನ್ನು ಸಮರ್ಥವಾಗಿ ಕಾರ್ಯನಿರ್ವಹಿಸುಲು ಅನುವಾಗುವಂತೆ Industrial Security Force ನ ನುರಿತ ಸಿಬ್ಬಂದಿಯನ್ನು ಒಳಾಡಳಿತ ಇಲಾಖೆ ಯಿಂದ ನಿಯೋಜನೆ ಮೇರೆಗೆ ನೇಮಿಸಲು ಕ್ರಮವಹಿಸಲಾಗುತ್ತಿದೆ.

3. ಪೊಲೀಸ್ ಇಲಾಖೆಯಿಂದ ಎಲ್ಲಾ ಬಾಲಮಂದಿರ ಹಾಗೂ ವೀಕ್ಷಣಾಲಯಗಳಲ್ಲಿ ಪೊಲೀಸ್ ಔಟ್ ಪೋಸ್ಟ್ ಒದಗಿಸಲು ಸಂಬಂಧಿಸಿದ ಇಲಾಖೆಯೊಂದಿಗೆ ಸಮಾಲೋಚಿಸಿ ಕ್ರಮ ವಹಿಸಲಾಗುತ್ತಿದೆ.

4. ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ-2015 ತಿದ್ದುಪಡಿ-2021, ಮಾದರಿ ನಿಯಮಗಳು-2016, ತಿದ್ದುಪಡಿ-2022ರ ಕಾಯ್ದೆಯನ್ವಯ ಮತ್ತು ಭಾರತ ಸರ್ಕಾರದಿಂದ ಕಾಣೆಯಾದ ಮಕ್ಕಳ ಕುರಿತು ಹೊರಡಿಸಿರುವ ಕಾರ್ಯವಿಧಾನದಲ್ಲಿ, ಕಾಣೆಯಾದ ಮಕ್ಕಳ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ 04 ತಿಂಗಳ ಅವಧಿಯೊಳಗೆ ಮಗು ಪತ್ತೆ ಹಚ್ಚಲು ಸಾಧ್ಯವಾಗದೇ ಇದ್ದಲ್ಲಿ ಅಂತಹ ಪ್ರಕರಣಗಳನ್ನು ಮಾನವ ಕಳ್ಳ ಸಾಗಾಣಿಕ ನಿಗ್ರಹ ಘಟಕ (AHTU) ಗಳಿಗೆ ವರ್ಗಾಯಿಸಲು ತಿಳಿಸಲಾಗಿರುತ್ತದೆ. ಅದರಂತೆ ಪೊಲೀಸ್ ಇಲಾಖೆಯಿಂದ ಕ್ರಮ ವಹಿಸಲಾಗುತ್ತಿದೆ.

5. ಕಾಣೆಯಾದ ಮಕ್ಕಳನ್ನು ಪತ್ತೆ ಹಚ್ಚುವ ಕುರಿತು ಮಾನ್ಯ ಉಚ್ಚನ್ಯಾಯಲಯದಲ್ಲಿ ರಿಟ್ ಅರ್ಜಿ 4021/2022 ದಾಖಲಾಗಿದ್ದು, ಮಾನ್ಯ ಉಚ್ಚನ್ಯಾಯಲಯವು ದಿನಾಂಕ: 02-08-2022ರಲ್ಲಿ ಪೊಲೀಸ್ ಇಲಾಖೆಗೆ ಕಾಣೆಯಾದ ಮಕ್ಕಳನ್ನು ಪತ್ತೆ ಹಚ್ಚಲು ಆದೇಶಿಸಿರುತ್ತದೆ.

6. ಜಿಲ್ಲಾಮಟ್ಟದ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳೊಂದಿಗೆ ನಿಕಟ ಸಂಪರ್ಕದಲ್ಲಿದ್ದು, ಮಕ್ಕಳನ್ನು ಪತ್ತೆ ಹಚ್ಚಲು ಅಗತ್ಯವಿರುವ ಪೂರಕ ಮಾಹಿತಿಗಳನ್ನು ಒದಗಿಸಲಾಗುತ್ತಿದೆ.

**ಇಲಾಖೆಯಿಂದ ಕೈಗೊಂಡ ಕ್ರಮಗಳು:**

1. ಬಾಲಮಂದಿರಗಳಲ್ಲಿ ಮಕ್ಕಳ ಸುರಕ್ಷತೆಗಾಗಿ CC ಕ್ಯಾಮರಾವನ್ನು ಅಳವಡಿಸಲಾಗಿದೆ.

2. ಕೇಂದ್ರ ಸರ್ಕಾರದ NTSMVC (National Tracking System For Missing and Vulnerable Children ) ಈ ಪೋರ್ಟಲ್ ನಲ್ಲಿ ಕಾಣೆಯಾದ ಮಕ್ಕಳ ಮಾಹಿತಿಯನ್ನು ಅಳವಡಿಸಲು ಅವಕಾಶವಿದ್ದು, ಈ ಮಕ್ಕಳು ಪತ್ತೆಯಾಗಿ ಬೇರೆ ಬಾಲಮಂದಿರಗಳಲ್ಲಿ ವಾಸ್ತವ್ಯ ಪಡೆದಿದ್ದಲ್ಲಿ ಮಾಹಿತಿ ಪಡೆಯಲು ಅನುಕೂಲವಾಗುತ್ತದೆ.

ಸಂಖ್ಯೆ: ಮಮಇ 26 ಮಭಾಬ 2023

HalappaBA

**(ಆಚಾರ ಹಾಲಪ್ಪ ಬಸಪ್ಪ)**
ಗಣಿ ಮತ್ತು ಭೂ ವಿಜ್ಞಾನ , ಮಹಿಳಾ ಮತ್ತು ಮಕ್ಕಳ
ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು.